# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ

ಆರ್. ಎಸ್. ಆರ್. ಸೌ. ಕಾ. 128–009–2001–02

ನೋಂದಾಯಿತ ಕಚೇರಿ: ದರ್ಬೆ, ಪುತ್ತೂರು–574202

ಆಡಳಿತ ಕಚೇರಿ: ಪ್ರಥಮ ಮಹಡಿ, ರಾಧಿಕಾ ಪ್ಲಾಜಾ (ಮಂಗಳಾಮೃತ ಸೌಧ), ಎಂ.ಎಸ್.ರಸ್ತೆ,

ಪುತ್ತೂರು ದ.ಕ. ಕರ್ನಾಟಕ ☎08251–237223 ಮೊ: 9739986848

www.saraswathisahakari.com E-mail: ho@saraswathisahakari.com


ದಿನಾಂಕ:18-11-2023

## ವ್ಯವಸ್ಥಾಪಕ, ಹಿರಿಯ ಅಧಿಕಾರಿ, ಕಿರಿಯ ಅಧಿಕಾರಿ, ಗುಮಾಸ್ತ ಮತ್ತು ಅಟೆಂಡರ್ ಹುದ್ದೆಗೆ ನೇಮಕಾತಿ ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: SSCSSSL/HO/RECRUITMENT/001/2023-24**

**ಆನ್‌ಲೈನ್ ಅರ್ಜಿ ನೋಂದಣಿ ಮತ್ತು ಅರ್ಜಿ ಶುಲ್ಕ ಪಾವತಿ ದಿನಾಂಕ: 20–11–2023 ರಿಂದ 04–12–2023**

**ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ** ನಿಯಮಿತದಲ್ಲಿ ವ್ಯವಸ್ಥಾಪಕ, ಹಿರಿಯ ಅಧಿಕಾರಿ, ಕಿರಿಯ ಅಧಿಕಾರಿ, ಗುಮಾಸ್ತ ಮತ್ತು ಅಟೆಂಡರ್ ಹುದ್ದೆ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೋಂದಣಿ ಮಾಡುವುದು. ಅಭ್ಯರ್ಥಿಗಳು ಅಧಿಸೂಚನೆಯಲ್ಲಿ ವಿವರಿಸಿದಂತೆ ಪರೀಕ್ಷಾ ವಿಧಾನ/ ಅರ್ಹತಾ ಮಾನದಂಡ, ಆನ್‌ಲೈನ್ ನೋಂದಣಿ ವಿಧಾನ, ಅರ್ಜಿ ಶುಲ್ಕ ಪಾವತಿ ವಿಧಾನ ಇತ್ಯಾದಿಗಳನ್ನು ಜಾಗರೂಕತೆಯಿಂದ ಓದಿ ನೋಂದಣಿ ಮಾಡುವುದು.

1. **ಶೆಡ್ಯೂಲ್:**

| | |
|---|---|
| ಆನ್‌ಲೈನ್ ನೋಂದಣಿ ಮತ್ತು ಅರ್ಜಿ ಶುಲ್ಕ ಪಾವತಿ | 20–11–2023 ರಿಂದ 04–12–2023 |

ಸಹಕಾರಿಯು ಆಗಾಗ ಹೊರಡಿಸುವ ಸೂಚನೆಗಳನ್ನು ತಿಳಿದುಕೊಳ್ಳಲು ಅಭ್ಯರ್ಥಿಗಳು ಸಹಕಾರಿಯ ಅಧಿಕೃತ ವೆಬ್‌ಸೈಟ್ www.saraswathisahakari.com ನ್ನು ವೀಕ್ಷಿಸುವುದು.

2. **ಹುದ್ದೆಗಳು:**

| ಹುದ್ದೆ | ಸಂಖ್ಯೆ |
|---|---|
| ವ್ಯವಸ್ಥಾಪಕ (Manager) | 02 |
| ಹಿರಿಯ ಅಧಿಕಾರಿ (Senior Officer) | 03 |
| ಕಿರಿಯ ಅಧಿಕಾರಿ (Junior Officer) | 10 |
| ಗುಮಾಸ್ತ (Clerk) | 25 |
| ಅಟೆಂಡರ್ (Attender) | 1 |
| **ಒಟ್ಟು** | 41 |

SHRI SARASWATHI CREDIT SOUHARDA SAHAKARI S. LTD. * H.O. PUTTUR

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ
ನಿಯಮಿತ ಪುತ್ತೂರು ಪರವಾಗಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿ

**3. ಅರ್ಹತೆಗಳು:**

**ಅ) ಕನಿಷ್ಠ ವಿದ್ಯಾರ್ಹತೆ ಮತ್ತು ಅನುಭವ:**

**1. ವ್ಯವಸ್ಥಾಪಕ ಹುದ್ದೆ:**

a) ಅಂಗೀಕೃತ/ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ **ಪದವಿ** ಪಡೆದಿರಬೇಕು. ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ ಆದವರಿಗೆ ಮತ್ತು ದ್ವಿಚಕ್ರ ವಾಹನ ಚಾಲನಾ ಪರವಾನಿಗೆಯನ್ನು ಹೊಂದಿದವರಿಗೆ ಆದ್ಯತೆ. ಬ್ಯಾಂಕ್ ಅಥವಾ ಕ್ರೆಡಿಟ್ ಸಹಕಾರಿ ಅಥವಾ ಹಣಕಾಸು ಸಂಸ್ಥೆಯಲ್ಲಿ ಕನಿಷ್ಠ **ಐದು ವರ್ಷ** ದುಡಿದ ಅನುಭವ ಕಡ್ಡಾಯ.

b) ಕಂಪ್ಯೂಟರ್ ಜ್ಞಾನ ಹೊಂದಿರುವುದು ಕಡ್ಡಾಯ.

c) ಕನ್ನಡ ಭಾಷಾ ಜ್ಞಾನ ಕಡ್ಡಾಯ.

**2. ಹಿರಿಯ ಅಧಿಕಾರಿ ಹುದ್ದೆ:**

a) ಅಂಗೀಕೃತ/ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ **ಪದವಿ** ಪಡೆದಿರಬೇಕು. ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ ಆದವರಿಗೆ ಮತ್ತು ದ್ವಿಚಕ್ರ ವಾಹನ ಚಾಲನಾ ಪರವಾನಿಗೆಯನ್ನು ಹೊಂದಿದವರಿಗೆ ಆದ್ಯತೆ. ಬ್ಯಾಂಕ್ ಅಥವಾ ಕ್ರೆಡಿಟ್ ಸಹಕಾರಿ ಅಥವಾ ಹಣಕಾಸು ಸಂಸ್ಥೆಯಲ್ಲಿ ಕನಿಷ್ಠ **ಮೂರು ವರ್ಷ** ದುಡಿದ ಅನುಭವ ಕಡ್ಡಾಯ.

b) ಕಂಪ್ಯೂಟರ್ ಜ್ಞಾನ ಹೊಂದಿರುವುದು ಕಡ್ಡಾಯ.

c) ಕನ್ನಡ ಭಾಷಾ ಜ್ಞಾನ ಕಡ್ಡಾಯ.

**3. ಕಿರಿಯ ಅಧಿಕಾರಿ ಹುದ್ದೆ:**

a) ಅಂಗೀಕೃತ/ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ **ಪದವಿ** ಪಡೆದಿರಬೇಕು. ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ ಆದವರಿಗೆ ಮತ್ತು ದ್ವಿಚಕ್ರ ವಾಹನ ಚಾಲನಾ ಪರವಾನಿಗೆಯನ್ನು ಹೊಂದಿದವರಿಗೆ ಆದ್ಯತೆ. ಬ್ಯಾಂಕ್ ಅಥವಾ ಕ್ರೆಡಿಟ್ ಸಹಕಾರಿ ಅಥವಾ ಹಣಕಾಸು ಸಂಸ್ಥೆಯಲ್ಲಿ ಕನಿಷ್ಠ **ಎರಡು ವರ್ಷ** ದುಡಿದ ಅನುಭವ ಕಡ್ಡಾಯ.

b) ಕಂಪ್ಯೂಟರ್ ಜ್ಞಾನ ಹೊಂದಿರುವುದು ಕಡ್ಡಾಯ.

c) ಕನ್ನಡ ಭಾಷಾ ಜ್ಞಾನ ಕಡ್ಡಾಯ.

**4. ಗುಮಾಸ್ತ ಹುದ್ದೆ:**

a) ಅಂಗೀಕೃತ/ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ **ಪದವಿ** ಪಡೆದಿರಬೇಕು. ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ ಆದವರಿಗೆ ಮತ್ತು ದ್ವಿಚಕ್ರ ವಾಹನ ಚಾಲನಾ ಪರವಾನಿಗೆಯನ್ನು ಹೊಂದಿದವರಿಗೆ ಆದ್ಯತೆ. ಪದವಿ ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಕೂಡಾ ಅರ್ಜಿ ಸಲ್ಲಿಸಬಹುದು, ಇಂತಹ ಅಭ್ಯರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಳ್ಳುವ ಸಂದರ್ಭದಲ್ಲಿ ಉತ್ತೀರ್ಣತೆ ಹೊಂದಿದ ಬಗ್ಗೆ ದಾಖಲೆಗಳನ್ನು ಒದಗಿಸತಕ್ಕದ್ದು.

b) ಕಂಪ್ಯೂಟರ್ ಜ್ಞಾನ ಹೊಂದಿರುವುದು ಕಡ್ಡಾಯ.

c) ಕನ್ನಡ ಭಾಷಾ ಜ್ಞಾನ ಕಡ್ಡಾಯ

**5. ಅಟೆಂಡರ್ ಹುದ್ದೆ:**

a) **ಎಸ್.ಎಸ್.ಎಲ್.ಸಿ** ಅಥವಾ **ತತ್ಸಮಾನ** ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಭ್ಯರ್ಥಿಗಳು ಸಹಕಾರಿಯು ನಡೆಸುವ ಸಂದರ್ಶನದಲ್ಲಿ ಉತ್ತೀರ್ಣರಾಗಬೇಕು.

b) ಕನ್ನಡ ಭಾಷಾ ಜ್ಞಾನ ಕಡ್ಡಾಯ

c) ದ್ವಿಚಕ್ರ ವಾಹನ ಚಾಲನಾ ಪರವಾನಿಗೆಯನ್ನು ಹೊಂದಿರುವುದು ಕಡ್ಡಾಯ.

SHRI SARASWATHI CREDIT SOUHARDA SAHAKARI NIYAMITHA * H.O. PUTTUR

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಪುತ್ತೂರು ಪರವಾಗಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಆ) **ವಯೋಮಿತಿ: 01-11-2023 ರಂತೆ**

| ಹುದ್ದೆಗಳು | ಗರಿಷ್ಠ ವಯೋಮಿತಿ |
|---|---|
| ವ್ಯವಸ್ಥಾಪಕ | 35 ವರ್ಷ |
| ಹಿರಿಯ ಅಧಿಕಾರಿ | 35 ವರ್ಷ |
| ಕಿರಿಯ ಅಧಿಕಾರಿ | 35 ವರ್ಷ |
| ಗುಮಾಸ್ತ | 35 ವರ್ಷ |
| ಅಟೆಂಡರ್ | 30 ವರ್ಷ |

4. **ಅರ್ಜಿ ಶುಲ್ಕ:**

| ಹುದ್ದೆಗಳು | ಅರ್ಜಿ ಶುಲ್ಕ |
|---|---|
| ವ್ಯವಸ್ಥಾಪಕ | Rs 1000.00 |
| ಹಿರಿಯ ಅಧಿಕಾರಿ | Rs 900.00 |
| ಕಿರಿಯ ಅಧಿಕಾರಿ | Rs 800.00 |
| ಗುಮಾಸ್ತ | Rs 700.00 |
| ಅಟೆಂಡರ್ | Rs 500.00 |

ಮೇಲಿನ ಅರ್ಜಿ ಶುಲ್ಕವು **GST** ಯನ್ನು ಒಳಗೊಂಡಿರುತ್ತದೆ. ಪಾವತಿಯಾದ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.

5. **ಅರ್ಜಿ ಸಲ್ಲಿಸುವ ವಿಧಾನ:**
ಅರ್ಜಿಗಳನ್ನು ಆನ್-ಲೈನ್ (ON-LINE) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. **ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.**

6. **ವೇತನ:**

| ಹುದ್ದೆಗಳು | ವೇತನ ಶ್ರೇಣಿ |
|---|---|
| ವ್ಯವಸ್ಥಾಪಕ | 37900-950-39800-1100-46400-1250-53900-1450-62600-1650-72500-1900-82000 |
| ಹಿರಿಯ ಅಧಿಕಾರಿ | 27000-650-29600-750-32600-850-36000-950-39800-1100-46400-1250-53900-1450-55350 |
| ಕಿರಿಯ ಅಧಿಕಾರಿ | 22950-550-24600-600-27000-650-29600-750-32600-850-36000-950-39800-1100-44200 |
| ಗುಮಾಸ್ತ | 20900-500-22400-550-24600-600-27000-650-29600-750-32600-850-36000-950-39800 |
| ಅಟೆಂಡರ್ | 19050-450-20400-500-22400-550-24600-600-27000-650-29600-750-32600-850-36000 |

* ವೇತನವು ಅನ್ವಯಿಸುವ ಭತ್ಯೆಗಳೊಂದಿಗೆ ಕಾಲಕಾಲಕ್ಕೆ ಪರಿಷ್ಕರಿಸಲ್ಪಡುವಂತೆ ಇರುತ್ತದೆ.

ಭವಿಷ್ಯನಿಧಿ ಕಾಯ್ದೆಯನ್ವಯ ಭವಿಷ್ಯನಿಧಿ, ಗ್ರಾಚ್ಯುಟಿ ಕಾಯ್ದೆಯನ್ವಯ ಗ್ರಾಚ್ಯುಟಿಯನ್ನು ನೀಡಲಾಗುವುದು. ಅಭ್ಯರ್ಥಿಗಳು ನೇಮಕಗೊಂಡು ಬೆಂಗಳೂರು ವಿಭಾಗದ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿದರೆ ಕಾಲಕಾಲಕ್ಕೆ ಅನ್ವಯಿಸುವ ನಗರ ಪರಿಹಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

SHRI SARASWATHI CREDIT SOUHARDA SAHAKARI NIYAMITHA * H.O. PUTTUR

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ
ನಿಯಮಿತ ಪುತ್ತೂರು ಪರವಾಗಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿ

7. **ನೇಮಕಾತಿ ವಿಧಾನ:**

a) **ಲಿಖಿತ ಪರೀಕ್ಷೆ:**

ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗಳನ್ನು ನಡೆಸಲಾಗುವುದು. ಲಿಖಿತ ಪರೀಕ್ಷೆಯು ಬಹು ಆಯ್ಕೆ ಮಾದರಿಯ ವಸ್ತುನಿಷ್ಠ ಪ್ರಶ್ನೆಗಳನ್ನು ಒಳಗೊಂಡಿದ್ದು, ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನ, ಕಂಪ್ಯೂಟರ್, ಬ್ಯಾಂಕಿಂಗ್ ಮತ್ತು ಸಹಕಾರ ಕ್ಷೇತ್ರ ಜ್ಞಾನ, Numerical Aptitude ಮತ್ತು Test of Reasoning, ಇಂಗ್ಲಿಷ್ ಜ್ಞಾನ ಇತ್ಯಾದಿ ವಿಷಯಗಳ ಮೇಲೆ ಇರುತ್ತದೆ. ತಪ್ಪು ಉತ್ತರಗಳಿಗೆ ಅಂಕಗಳನ್ನು ಕಳೆಯಲಾಗುವುದಿಲ್ಲ. ಉತ್ತರ ಪತ್ರಿಕೆಯ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.

b) **ಸಂದರ್ಶನ:**

ಲಿಖಿತ ಪರೀಕ್ಷಾ ಫಲಿತಾಂಶದ ಆಧಾರದಲ್ಲಿ 1:5 ಅನುಪಾತದಲ್ಲಿ ಸಂದರ್ಶನ ಪಟ್ಟಿ ತಯಾರಿಸಿ, ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇರ ಸಂದರ್ಶನ ನಡೆಸಲಾಗುವುದು. ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಹಕಾರಿಯ ಸಿಬ್ಬಂದಿ ಸೇವಾ ನಿಯಮಾವಳಿಗಳಂತೆ ನೇಮಕಾತಿ ಮಾಡಲಾಗುವುದು.

ಅಟೆಂಡರ್ ಹುದ್ದೆಗೆ ಲಿಖಿತ ಪರೀಕ್ಷೆ ಇರುವುದಿಲ್ಲ, ನೇರ ಸಂದರ್ಶನ ಮಾತ್ರ ನಡೆಸಲಾಗುವುದು.

8. **ವೃತ್ತಿ ಮಾರ್ಗಸೂಚಿ :**

ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಪ್ರೊಬೆಶನರಿ ಅವಧಿಯು, ಅಟೆಂಡರ್ ಹುದ್ದೆಗೆ ಒಂದು ವರ್ಷ ಮತ್ತು ಇನ್ನುಳಿದ ಹುದ್ದೆಗಳಿಗೆ ಎರಡು ವರ್ಷವಾಗಿರುತ್ತದೆ. ಆಯ್ಕೆಗೊಂಡ ಅಭ್ಯರ್ಥಿಯು ಯಾವುದೇ ಶಾಖೆಗಳಿಗೆ ವರ್ಗಾವಣೆಗೆ ಬದ್ಧರು. ತೃಪ್ತಿಕರವಾಗಿ ಪ್ರೊಬೆಶನರಿ ಅವಧಿಯನ್ನು ಪೂರೈಸಿದ ಸಿಬ್ಬಂದಿಗಳನ್ನು ಸಹಕಾರಿಯ ಸಿಬ್ಬಂದಿ ಸೇವಾ ನಿಯಮದಂತೆ ಖಾಯಂಮಾತಿ ಮಾಡಲಾಗುವುದು.

9. **ಪರೀಕ್ಷಾ ಕರೆಪತ್ರ:**

ಅಭ್ಯರ್ಥಿಗಳು ತಮ್ಮ ಪರೀಕ್ಷಾ ಕರೆಪತ್ರವನ್ನು ಸಹಕಾರಿಯ ವೆಬ್‌ಸೈಟ್‌ನಲ್ಲಿ ನೋಂದಣಿ ಸಂಖ್ಯೆ ಮತ್ತು ಪಾಸ್‌ವರ್ಡ್‌ನ್ನು ದಾಖಲಿಸಿ ಪಡೆಯಬಹುದು (download). ಈ ಬಗ್ಗೆ ತಿಳುವಳಿಕೆ ಸಂದೇಶವನ್ನು ಮೊಬೈಲ್ ಹಾಗೂ ಮಿಂಚಂಚೆ (Email) ಗೆ ಕಳುಹಿಸಲಾಗುವುದು. ಲಿಖಿತ ಪರೀಕ್ಷಾ ಸಂದರ್ಭದಲ್ಲಿ ಅಭ್ಯರ್ಥಿಯು ಪರೀಕ್ಷಾ ಕರೆಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಕರೆಪತ್ರವನ್ನು ಅಂಚೆ ಮೂಲಕ ಯಾವುದೇ ಕಾರಣಕ್ಕೂ ಕಳುಹಿಸಲಾಗುವುದಿಲ್ಲ.

10. **ದುರ್ನಡತೆ:-**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ, ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ, ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಅಥವಾ ಅಭ್ಯರ್ಥಿಯು ಯಾವುದೇ ಕ್ರಿಮಿನಲ್ ಅಪರಾಧಗಳಲ್ಲಿ ಭಾಗಿಯಾಗಿರುವನೆಂದು ಕಂಡುಬಂದರೆ ಅವನು / ಅವಳು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಪುತ್ತೂರು ಪರವಾಗಿ

SHRI SARASWATHI CREDIT SOUHARDA SAHAKARI NIYAMITHA * H.O. PUTTUR

ಮುಖ್ಯ ಕಾರ್ಯನಿರ್ವಹಣಾಧಿಕಾರಿ

**11. ಸಾಮಾನ್ಯ ಮಾಹಿತಿಗಳು:**

1. ಆನ್‌ಲೈನ್ ಅರ್ಜಿ ಸಲ್ಲಿಕೆಯ ಬಳಿಕ ಅಭ್ಯರ್ಥಿಯು ಅರ್ಜಿ ನಮೂನೆಯ ಪ್ರಿಂಟ್‌ಗಳನ್ನು ತೆಗೆದಿರಿಸಲು ಸಲಹೆ ನೀಡಲಾಗಿದೆ.
2. ಅಭ್ಯರ್ಥಿಯು ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದವರೆಗೆ ಕಾಯದೆ ಮೊದಲಾಗಿ ಅರ್ಜಿಯನ್ನು ಸಲ್ಲಿಸುವುದು ಅಪೇಕ್ಷಣೀಯ. ಇದರಿಂದಾಗಿ ಕೊನೆಯ ಕ್ಷಣದಲ್ಲಿ ಉಂಟಾಗುವ ಗೊಂದಲವನ್ನು ತಪ್ಪಿಸಬಹುದು. ಯಾವುದೇ ಕಾರಣಕ್ಕಾಗಿ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ ಇದಕ್ಕೆ ಸಹಕಾರಿಯು ಹೊಣೆಯಲ್ಲ.
3. **ಓರ್ವ ಅಭ್ಯರ್ಥಿಯು ಮೇಲ್ಕಂಡ ಹುದ್ದೆಗಳಲ್ಲಿ ಯಾವುದಾದರೂ ಒಂದು ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು**. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಎಲ್ಲಾ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು. ಅಂತಹ ಅರ್ಜಿಗಳಿಗೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೆ ಹಿಂದಿರುಗಿಸಲಾಗುವುದಿಲ್ಲ.
4. ಓರ್ವ ಅಭ್ಯರ್ಥಿಯು ಒಂದು ಹುದ್ದೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ಯಾವುದಾದರು ಒಂದು ಅರ್ಜಿಯನ್ನು ಮಾತ್ರ ಪುರಸ್ಕರಿಸಲಾಗುವುದು ಮತ್ತು ಹೆಚ್ಚುವರಿ ಅರ್ಜಿಗಳಿಗೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೆ ಹಿಂದಿರುಗಿಸಲಾಗುವುದಿಲ್ಲ.
5. ಕರೆಪತ್ರ, ಸಂದರ್ಶನದ ತಿಳುವಳಿಕೆ ಮಾಹಿತಿ ಇತ್ಯಾದಿಗಳನ್ನು ಪಡೆಯಲು ಅಭ್ಯರ್ಥಿಗಳು ತಮ್ಮ ಮಿಂಚಂಚೆ (E-mail)ಯನ್ನು ಕ್ರಿಯಾಶೀಲವಾಗಿಟ್ಟುಕೊಳ್ಳತಕ್ಕದ್ದು.
6. ಲಿಖಿತ ಪರೀಕ್ಷಾ ಕೇಂದ್ರ ಮತ್ತು ಸಂದರ್ಶನ ಕೇಂದ್ರವು ಸಹಕಾರಿಯ **ಪ್ರಧಾನ ಕಚೇರಿಯಾದ ಪುತ್ತೂರು ದ.ಕ.** ವ್ಯಾಪ್ತಿಯಲ್ಲಿರುವುದು.
7. ಅಭ್ಯರ್ಥಿಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನಕ್ಕೆ ಅವರದ್ದೇ ವೆಚ್ಚದಲ್ಲಿ ಹಾಜರಾಗತಕ್ಕದ್ದು. ಸಹಕಾರಿಯಿಂದ ಯಾವುದೇ ವೆಚ್ಚಗಳನ್ನು ಪಾವತಿಸಲಾಗುವುದಿಲ್ಲ.
8. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಯ ಮೂಲಪ್ರತಿ ಮತ್ತು ಅನ್ವಯಿಸುವ ಹುದ್ದೆಗಳಿಗೆ ಕನಿಷ್ಠ ಸೇವಾನುಭವ ಪತ್ರದ ಮೂಲಪ್ರತಿಯನ್ನು ಸಂದರ್ಶನದ ಸಂದರ್ಭದಲ್ಲಿ ಕಡ್ಡಾಯವಾಗಿ ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.
9. ಆಯ್ಕೆಗೊಂಡ ಅಭ್ಯರ್ಥಿಗಳು ಸಹಕಾರಿಯ ಎಲ್ಲಾ ನಿಯಮಾವಳಿಗಳಿಗೆ/ಶರ್ತಗಳಿಗೆ ಬದ್ಧರಾಗಿರತಕ್ಕದ್ದು.
10. ಅಧಿಸೂಚನೆ, ನೇಮಕಾತಿ ಪ್ರಕ್ರಿಯೆ ಹಾಗೂ ನೇಮಕಾತಿ ನಿಯಮಾವಳಿಗಳು, ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಮತ್ತು ನಿಯಮಗಳು 2004, ಸಹಕಾರಿಯ ಉಪವಿಧಿಗಳು ಮತ್ತು ಸಿಬ್ಬಂದಿ ಸೇವಾ ನಿಯಮಗಳಿಗೆ ಒಳಪಡುವುದು.

**12. ಸಹಾಯವಾಣಿ:**

ಅರ್ಜಿ ತುಂಬುವ ವಿಧಾನ, ಶುಲ್ಕ ಪಾವತಿ, ಪರೀಕ್ಷಾ ಕರೆ ಪತ್ರ ಇವುಗಳ ಕುರಿತು ಯಾವುದೇ ಮಾಹಿತಿಗಳನ್ನು ಅಪೇಕ್ಷಿಸಿದ್ದಲ್ಲಿ ಸಹಕಾರಿಯ ಸಹಾಯವಾಣಿ ಸಂಖ್ಯೆ: 9739986848, 7022284004, 08251-237223 ಕ್ಕೆ ಕಚೇರಿ ದಿನಗಳಂದು ಪೂರ್ವಾಹ್ನ ಗಂಟೆ 10.00 ರಿಂದ ಅಪರಾಹ್ನ ಗಂಟೆ 04.30 ರ ಅವಧಿಯಲ್ಲಿ ಕರೆ ಮಾಡಬಹುದು.

**13. ಪ್ರಕಟಣೆ/ಘೋಷಣೆ:**

ಮುಂದಿನ ಎಲ್ಲಾ ಪ್ರಕಟಣೆ/ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ವಿವರಗಳನ್ನು ಸಹಕಾರಿಯ ಅಧಿಕೃತ ವೆಬ್‌ಸೈಟ್ www.saraswathisahakari.com ನಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುವುದು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ
ನಿಯಮಿತ ಪುತ್ತೂರು ಪರವಾಗಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿ

**14. ಹಕ್ಕುನಿರಾಕರಣೆ (Disclaimer)**

ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಒಬ್ಬ ಅಭ್ಯರ್ಥಿಯು ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ, ಅವನು/ಅವಳು ಒದಗಿಸಿದ ಮಾಹಿತಿಗಳು ತಪ್ಪೆಂದು ಕಂಡು ಬಂದಲ್ಲಿ ಅವನ/ಅವಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು. ಒಂದು ವೇಳೆ ನೇಮಕಾತಿಯ ಬಳಿಕ ಯಾವುದೇ ನ್ಯೂನತೆಗಳು ಪತ್ತೆಯಾದಲ್ಲಿ ಅವನು/ಅವಳನ್ನು ಸೇವೆಯಿಂದ ತೆಗೆದು ಹಾಕಬಹುದು. ನೇಮಕಾತಿಯ ಅರ್ಹತೆ, ಲಿಖಿತ ಪರೀಕ್ಷೆ, ಸಂದರ್ಶನ, ಆಯ್ಕೆ ಪ್ರಕ್ರಿಯೆಯಲ್ಲಿ ಸಹಕಾರಿಯ ನಿರ್ಣಯವೇ ಅಂತಿಮವಾಗಿರುತ್ತದೆ ಮತ್ತು ಎಲ್ಲಾ ಅಭ್ಯರ್ಥಿಗಳು ಈ ನಿಯಮಕ್ಕೆ ಬದ್ಧರಾಗಿರುವುದು. ಈ ಸಂಬಂಧ ಯಾವುದೇ ಅಹವಾಲು/ಮನವಿ/ಪತ್ರ ವ್ಯವಹಾರವನ್ನು ಸಹಕಾರಿಯು ನಡೆಸುವುದಿಲ್ಲ. ಸದ್ರಿ ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಮುನ್ಸೂಚನೆಯಿಲ್ಲದೆ ರದ್ದುಗೊಳಿಸುವ, ಮುಂದೂಡುವ, ಬದಲಾಯಿಸುವ ಅಧಿಕಾರ ಸಹಕಾರಿಗಿರುತ್ತದೆ.

**ವಸಂತ ನಾಯಕ್ ಎ.**

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಪುತ್ತೂರು

ದಿನಾಂಕ:18-11-2023